**2 ನೇ ಅಪರ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಮದ್ದೂರು**
**ಸಿ.ಸಿ. 72/2020**

**ಫಿರ್ಯಾಧಿದಾರರು: ಮದ್ದೂರು ಪೋಲಿಸ್ ಠಾಣೆ**

**-ವಿರುದ್ಧ-**

**ಆರೋಪಿತರು: -**

1. **ಕೃಷ್ಣ ಬಿನ್ ಲೇ.ಕರಿಯಪ್ಪ, 40 ವರ್ಷ,**
2. **ರಾಮು ಬಿನ್ ಲೇ.ಚಿಕ್ಕಮುತ್ತಯ್ಯ, 55 ವರ್ಷ,**
3. **ಮರಿಗೌಡ ಬಿನ್ ಕರಡಿಗೌಡ, 56 ವರ್ಷ,**
4. **ಶಂಕರಯ್ಯ ಬಿನ್ ಲೇ.ಸಿದ್ದಯ್ಯ, 57 ವರ್ಷ,**
5. **ಆತ್ಮಾನಂದ ಬಿನ್ ಮೊಳ್ಳೇಬೋರಯ್ಯ, 50 ವರ್ಷ,**
6. **ಭಾನುಪ್ರಕಾಶ್ ಬಿನ್ ಸಾಕಯ್ಯ, 45 ವರ್ಷ,**

**ಎಲ್ಲರ ವಾಸ: ವಳಗೆರೆಹಳ್ಳಿ ಗ್ರಾಮ,**
**ಮದ್ದೂರು ತಾ:**

## -: ದೋಷಾರೋಪಣೆ:-

ಶ್ರೀ. **ಕೋನಪ್ಪ ಎನ್.ವಿ.,** ಬಿ.ಎ.ಎಲ್., ಎಲ್.ಎಲ್.ಬಿ., 2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ಗಳು, ಮದ್ದೂರು ಆದ ನಾನು ಈ ಮೇಲ್ಕಂಡ ನಿಮ್ಮನ್ನು ಈ ಕೆಳಗಿನಂತೆ ದೋಷಾರೋಪಣೆಗೆ ಒಳಪಡಿಸುತ್ತಿದ್ದೇನೆ :

ದಿನಾಂಕ: 08/05/2017 ರಂದು ಮಧ್ಯಾಹ್ನ ಸುಮಾರು 1-15 ಗಂಟೆ ಸಮಯದಲ್ಲಿ ಮದ್ದೂರು ಪೋಲೀಸ್ ಠಾಣಾ ಸರಹದ್ದಿಗೆ ಸೇರಿದ ಮದ್ದೂರು ತಾಲ್ಲೂಕು ಬಿ.ಹೊಸಹಳ್ಳಿ ಗ್ರಾಮದ ಸರ್ವೆ ನಂಬರ್ 29 ರಲ್ಲಿನ ಜಮೀನಿನಲ್ಲಿ ಕರ್ನಾಟಕ ಸರ್ಕಾರದ ವಸತಿ ಶಿಕ್ಷಣ ಇಲಾಖಾ ವತಿಯಿಂದ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಕಟ್ಟಡವನ್ನು ನಿರ್ಮಿಸುತ್ತಿರುವ ಸ್ಥಳಕ್ಕೆ ಆರೋಪಿತರಾದ ನೀವುಗಳು ಅಕ್ರಮ ಕೂಟ ಕಟ್ಟಿಕೊಂಡು ಅಪರಾಧಿಕ ಬಲಪ್ರಯೋಗ ಮಾಡಿದ್ದರಿಂದ ಭಾರತೀಯ ದಂಡ ಸಂಹಿತೆ ಕಲಂ 143 ಸಹವಾಚಕ ಕಲಂ: 149 ರಡಿಯಲ್ಲಿ ಶಿಕ್ಷರ್ಹಾವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ ಎಂದು ದೋಷಾರೋಪಿಸುತ್ತೇನೆ.

2. ಎರಡನೆಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವುಗಳು ಅಪರಾಧ ಮಾಡುವ ಉದ್ದೇಶದಿಂದ, ವಿಧಿ ವಿರುದ್ಧ ಕೂಟ ರಚನೆ ಮಾಡಿಕೊಂಡು ಕರ್ನಾಟಕ ಸರ್ಕಾರದ ವಸತಿ ಶಿಕ್ಷಣ ಇಲಾಖಾ ವತಿಯಿಂದ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಕಟ್ಟಡವನ್ನು ನಿರ್ಮಿಸುತ್ತಿರುವ ಸ್ಥಳಕ್ಕೆ ಅತಿಕ್ರಮ ಪ್ರವೇಶ ಮಾಡಿದ್ದರಿಂದ ಭಾರತೀಯ ದಂಡ ಸಂಹಿತೆ ಕಲಂ 447 ಸಹವಾಚಕ ಕಲಂ: 149 ರಡಿಯಲ್ಲಿಶಿಕ್ಷರ್ಹಾವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ ಎಂದು ದೋಷಾರೋಪಿಸುತ್ತೇನೆ.

3. ಮೂರನೆಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವುಗಳು ಅಪರಾಧ ಮಾಡುವ ಉದ್ದೇಶದಿಂದ, ವಿಧಿ ವಿರುದ್ಧ ಕೂಟ ರಚನೆ ಮಾಡಿಕೊಂಡು ಹೋಗಿ ಚಾಸಾ.1 ರಿಂದ 4 ರವರನ್ನು ಕೆಲಸ ನಿರ್ವಹಿಸದಂತೆ ಹಾಗೂ ಮುಂದಕ್ಕೆ ಹೋಗದಂತೆ ಅಡ್ಡಗಟ್ಟಿ ತಡೆದು ಅಕ್ರಮ ಪ್ರತಿಬಂಧವನ್ನುಂಟು ಮಾಡಿದ್ದರಿಂದ ಭಾರತೀಯ ದಂಡ ಸಂಹಿತೆ ಕಲಂ 341 ಸಹವಾಚಕ ಕಲಂಃ 149 ರಡಿಯಲ್ಲಿ ಶಿಕ್ಷರ್ಹಾವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ ಎಂದು ದೋಷಾರೋಪಿಸುತ್ತೇನೆ.

4. ನಾಲ್ಕನೆಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವುಗಳು ಅಪರಾಧ ಮಾಡುವ ಉದ್ದೇಶದಿಂದ, ವಿಧಿ ವಿರುದ್ಧ ಕೂಟ ರಚನೆ ಮಾಡಿಕೊಂಡು ಕರ್ನಾಟಕ ಸರ್ಕಾರದ ವಸತಿ ಶಿಕ್ಷಣ ಇಲಾಖಾ ವತಿಯಿಂದ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಕಟ್ಟಡವನ್ನು ನಿರ್ಮಿಸುತ್ತಿರುವ ಸ್ಥಳಕ್ಕೆ ಮಾರ್ಕಿಂಗ್ ಗೋಡೆಯನ್ನು ಹೊಡೆದು ಹಾಕಿ ಸುಮಾರು 2 ಲಕ್ಷ ರೂಪಾಯಿಗಳ ನಷ್ಟವುಂಟು ಮಾಡಿದ್ದರಿಂದ ಭಾರತೀಯ ದಂಡ ಸಂಹಿತೆ ಕಲಂ 427 ಸಹವಾಚಕ ಕಲಂಃ 149 ರಡಿಯಲ್ಲಿ ಶಿಕ್ಷರ್ಹಾವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ ಎಂದು ದೋಷಾರೋಪಿಸುತ್ತೇನೆ.

5. ಕೊನೆಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವುಗಳು ಅಪರಾಧ ಮಾಡುವ ಉದ್ದೇಶದಿಂದ, ವಿಧಿ ವಿರುದ್ಧ ಕೂಟ ರಚನೆ ಮಾಡಿಕೊಂಡು ಹೋಗಿ ಚಾಸಾ.1 ರಿಂದ 4 ರವರಿಗೆ ಇಲ್ಲಿ ಕೆಲಸ ಮಾಡಿದರೆ ನಿಮ್ಮಗಳನ್ನು ಕೊಲೆ ಮಾಡುತ್ತೇವೆ ಎಂದು ಪ್ರಾಣ ಬೆದರಿಕೆ ಹಾಕಿದ್ದರಿಂದ ಭಾರತೀಯ ದಂಡ ಸಂಹಿತೆ ಕಲಂ 506 ಸಹವಾಚಕ ಕಲಂಃ 149 ರಡಿಯಲ್ಲಿ ಶಿಶಿಕ್ಷರ್ಹಾವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ ಎಂದು ದೋಷಾರೋಪಿಸುತ್ತೇನೆ.

ಪ್ರಶ್ನೆಃ1. ಈ ಮೇಲೆ ಹೇಳಿ, ನಿಮಗೆ ವಿವರಿಸಲಾದ, ಈ ದೋಷಾರೋಪಣೆ ಅರ್ಥವಾಯಿತಾ?

ಉತ್ತರಃ

ಪ್ರಶ್ನೆಃ2. ಈ ಮೇಲೆ ಹೇಳಿದ ದೋಷಾರೋಪಣೆ ಯನ್ನು ಒಪ್ಪಿಕೊಳ್ಳುತ್ತಿರೋ ಅಥವಾ ವಿಚಾರಣೆ ಆಗಬೇಕಾ?

ಉತ್ತರಃ

(ಈ ಮೇಲೆ ಹೇಳಿದ ದೋಷಾರೋಪಣೆಯನ್ನು ಆರೋಪಿತರಿಗೆ ಅವರಿಗೆ ತಿಳಿಯುವಂತಹ ಕನ್ನಡ ಭಾಷೆಯಲ್ಲಿ ಓದಿ, ವಿವರಿಸಿ ಹೇಳಿ, ಅವರು ಕೊಟ್ಟಂತಹ ಉತ್ತರವನ್ನು ಅವರ ಭಾಷೆಯಲ್ಲಿಯೇ ಯಥವತ್ತಾಗಿ ನನ್ನ ಕೈ ಬರಹದಲ್ಲಿ ತೆರೆದ ನ್ಯಾಯಾಲಯದಲ್ಲಿ ಬರೆದುಕೊಂಡಿದ್ದೇನೆ.)

(ಶ್ರೀ ಕೋನಪ್ಪ ಎನ್ ವಿ)

ದಿನಾಂಕಃ27-10-2023 2 ನೇ ಅಪರ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ ಮದ್ದೂರು.